ಮೂಲ ದಾವಾ ಸಂಖ್ಯೆ. 04/2023 ಡಿ ಡಬ್ಲ್ಯೂ 1

(ದಿನಾಂಕ 29-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

<u>ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ. ಹೆಚ. ವಕೀಲರಿಂದಃ-</u>

ದಾವಾ ಆಸ್ತಿ ನಂ. 114 ಇರುತ್ತದೆ. ಅದರ ವಿಸ್ತೀರ್ಣ ಪೂರ್ವ ಪಶ್ಚಿಮ 80 ಅಡಿ, ಉತ್ತರ ದಕ್ಷಿಣ 50 ಅಡಿ ಇರುತ್ತದೆ. ಅದರ ಚೆಕ್ಕುಬಂದಿ ಪೂರ್ವಕ್ಕೆ ದಾರಿ, ಪಶ್ಚಿಮಕ್ಕೆ ಹೆಚ. ಕಸ್ತೂರಮ್ಮ ಇವರ ಪ್ಲಾಟ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಪಕ್ಕೀರಪ್ಪ ಇವರ ಪ್ಲಾಟು ಇರುತ್ತದೆ. ಈ ಆಸ್ತಿಯು ಮೂಲತಃ ಹುಲಿಗೆಮ್ಮ ಇವರದ್ದು ಆಗಿರುತ್ತದೆ. ಆ ಆಸ್ತಿ ಅವರಿಗೆ ಹೇಗೆ ಬಂತು ಎಂದರೆ ಸಾಕ್ಷಿಯು ಅವರ ಆಸ್ತಿ ಮುಳುಗಡೆ ಆದ ನಂತರ ದಾವಾ ಆಸ್ತಿಯನ್ನು ಅವರಿಗೆ ಸರಕಾರದವರು ಕೊಟ್ಟಿರುತ್ತಾರೆ. ಸದರಿ ಆಸ್ತಿಯ ಪಶ್ಚಿಮಕ್ಕೆ ಹುಲ್ಲುಮನಿ ನಿಂಗಜ್ಜ ಇವರ ಆಸ್ತಿ ಇದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನಮ್ಮದೆ ಆಸ್ತಿ ಇರುತ್ತದೆ ಅನ್ನುತ್ತಾರೆ. ಸದರಿ ಪಶ್ಚಿಮಕ್ಕೆ ದಿಕ್ಕಿಗೆ ಇರುವ ಆಸ್ತಿ ನಮಗೆ ಸರಕಾರದಿಂದ ಮಂಜೂರಾದ ಆಸ್ತಿಆಗಿರುತ್ತದೆ. ಆ ಆಸ್ತಿ ನಂ. 113 ಇರುತ್ತದೆ. ದಾವಾ ಆಸ್ತಿಯನ್ನು ನಮ್ಮ ಅಜ್ಜಿ ಕಸ್ತೂರಮ್ಮ ಇವುರ ಮೂಲಿಮನೆ ಶೇಖರಪ್ಪ ಮತ್ತು ಮೂಲಿಮನಿ ಚಂದ್ರಪ್ಪ ಇವರಿಂದ ಖರೀದಿ ಮಾಡಿರುತ್ತಾರೆ. ಸದರಿ ಖರೀದಿ ಪತ್ರ ನೊಂದಣಿ ದಾಖಲೆ ಆಗಿರುವುದಿಲ್ಲ. ಸದರಿ ಖರೀದಿ ಪತ್ರವು ದಿ: 26-10-1985 ರಲ್ಲಿ ಆಗಿರುತ್ತದೆ. ನಾವು ಸದರಿ ದಾಖಲೆಯನ್ನು ನೊಂದಣಿ ಮಾಡಿಸಿಕೊಳ್ಳಲು ಬಹಳ ಪ್ರಯತ್ನ ಮಾಡಿರುತ್ತೆವೆ ಆದರೆ ಅದರ ಮಾರಾಟಗಾರರು ನಮಗೆ ಅದನ್ನು ನೊಂದಣಿಮಾಡಿಸಿಕೊಟ್ಟಿರುವುದಿಲ್ಲ. ಸದರಿ ಖರೀದ ಪತ್ರ ನೊಂದಣಿ ಬಗ್ಗೆ ನಾವು ಶೇಖರಪ್ಪ ಇವರ ಬಳಿ ಸಾಕಷ್ಟು ಬಾರಿ ವಿಚಾರಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಆ ರೀತಿ ಅವರಿಗೆ ಕೇಳಿದೆ ಅಂತ ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ಶೇಖರಪ್ಪ ಇವರು ಸನ್ 2011 ರಲ್ಲಿ ದಾವಾ ಆಸ್ತಿಯನ್ನು ವಾದಿಯ ಹೆಸರಿಗೆ ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅವರು ನಮಗೆ ಗೊತ್ತಿಲ್ಲದೆ ಮಾಡಿಕೊಂಡಿರುತ್ತಾರೆ ಅನ್ನುತ್ತಾರೆ. ಸದರಿ ದಾಖಲೆಯಲ್ಲಿ ನಾನು ಯಾರಿಗೂ ಪರಾಧೀನ ಮಾಡಿಲ್ಲ ಅಂತಾ ಉಲ್ಲೇಖಿಸಿದ್ದು ಅಂದರೆ ನನಗೆ ಗೊತ್ತಿಲ್ಲ. ಸದರಿ ಸೃಷ್ಟಿ ಮಾಡಿಕೊಟ್ಟಿರುವಂತಹ ಖರೀದಿ ಪತ್ರ ಊರ್ಜಿತವಾಗಿರುವುದಿಲ್ಲ ಅಂದರೆ ಸರಿಯಲ್ಲ. ಶೇಖರಪ್ಪ ಮತ್ತು ಅವರ ಮಕ್ಕಳಿಗೆ ತೊಂದರೆ ಕೊಡಲು ದಾವಾ ಆಸ್ತಿಯನ್ನು ಕಬಳಿಸಲು, ದಾವಾ ಆಸ್ತಿಯು ವಾದಿಯ ಸ್ವಾಧೀನಕ್ಕೆ

ಅಡ್ಡಿಪಡಿಸುತ್ತಿದ್ದೇವೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿ ಇಲ್ಲದಿದ್ದರು ಸಹ ಸ್ವಾಧೀನದಲ್ಲಿರುತ್ತೇವೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿ ಮತ್ತು ಅವರ ತಾಯಿ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಅವರು ಆಸ್ತಿ ನಮಗೆ ಮಾರಾಟ ಮಾಡಿ ಹೊಗಿರುತ್ತಾರೆ ಅಂತಾ ನುಡುಯುತ್ತಾರೆ. ವಾದಿಯ ತಂದೆಗೆ ಮಕ್ಕಳು ಇರುವುದರಿಂದ ಅವರಿಗೆ ದಾವಾ ಆಸ್ತಿಯ ಮಾರಾಟ ಮಾಡಲು ಅವಶ್ಯಕೆ ಇರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟಿಸವಾಲಿಗಾಗಿ ಪ್ರತಿವಾದಿಯ ಪರ ವಕೀಲರು ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ